# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 799 (732) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |
| ಉತ್ತರಿಸುವ ದಿನಾಂಕ | : | 20.09.2022 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಂಡಿದೆಯೇ; (ಜಿಲ್ಲಾವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC) ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ (SLSWCC) ಸಭೆಗಳಲ್ಲಿ ಒಟ್ಟು1103 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ರೂ.127386 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಹಾಗೂ ಒಟ್ಟು 343593 ಜನರಿಗೆ ಉದ್ಯೋಗ ಸೃಜನೆಯಾಗಲಿದೆ. ವರ್ಷವಾರು ವಿವರ ಕೆಳಕಂಡಂತಿದೆ:<br><br>
<table>
<tr><th>ವರ್ಷ</th><th>ಅನುಮೋದನೆಯಾದ ಯೋಜನೆಗಳು</th><th>ಬಂಡವಾಳ ಹೂಡಿಕೆ (ರೂ. ಕೋಟಿಯಲ್ಲಿ)</th><th>ಉದ್ಯೋಗ ಅವಕಾಶ</th></tr>
<tr><td>2019-20</td><td>186</td><td>30001</td><td>98289</td></tr>
<tr><td>2020-21</td><td>307</td><td>51856</td><td>111603</td></tr>
<tr><td>2021-22</td><td>610</td><td>45529</td><td>133701</td></tr>
<tr><td>ಒಟ್ಟು</td><td>1103</td><td>127386</td><td>343593</td></tr>
</table>
<br>ಅನುಮೋದನೆಯಾದ ಯೋಜನೆಗಳ ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>(ಆ)</td><td>ರಾಜ್ಯದಲ್ಲಿ ಬೃಹತ್ ಕೈಗಾರಿಕೆ ನಿರ್ಮಿಸಿ, ನಿರುದ್ಯೋಗಿ ಯುವಕರುಗಳಿಗೆ ಉದ್ಯೋಗ ದೊರಕಿಸಿಕೊಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; (ಸಂಪೂರ್ಣವಾದ ವಿವರ ನೀಡುವುದು)</td><td>ಹೌದು.<br><br>ಖಾಸಗಿ ಉದ್ದಿಮೆದಾರರಿಗೆ ಕೈಗಾರಿಕಾ ನೀತಿ 2020-25ರಡಿ ಲಭ್ಯವಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯಲು ಕೈಗಾರಿಕೆಗಳಿಗೆ ಉದ್ಯೋಗ ಮಾನದಂಡವು ಈ ಕೆಳಕಂಡಂತಿದೆ.<br><br>"ಒಟ್ಟು ಉದ್ಯೋಗದಲ್ಲಿ ಶೇ. 70ರಷ್ಟು ಹಾಗೂ ಗ್ರೂಪ್ ಡಿ ವರ್ಗದಲ್ಲಿ ಶೇ. 100ರಷ್ಟು ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂಬ ಮಾನದಂಡ ಇರುತ್ತದೆ".<br><br>ನಿರುದ್ಯೋಗಿಗಳು ಉದ್ಯೋಗ ದೊರೆಕಿಸಿಕೊಳ್ಳಲು ಅನುವಾಗುವಂತೆ ರಾಜ್ಯದಲ್ಲಿ ಇತ್ತೀಚೆಗೆ ಹೊಸದಾಗಿ "ಉದ್ಯಮಿಯಾಗು, ಉದ್ಯೋಗ ನೀಡು" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮವನ್ನು ರಾಜ್ಯದ 6 ವಿಭಾಗೀಯ ಕೇಂದ್ರಸ್ಥಾನಗಳಲ್ಲಿ ಆಯಾ ಸಂಬಂಧಪಟ್ಟ ಜಿಲ್ಲೆಗಳನ್ನು ಒಳಗೊಂಡಂತೆ ನಡೆಸಲಾಗಿದೆ.</td></tr>
<tr><td>(ಇ)</td><td>ಬೃಹತ್ ಕೈಗಾರಿಕೆ ಪ್ರಾರಂಭಿಸಲು ಯಾವ ಯಾವ ಜಿಲ್ಲೆಗಳನ್ನು ಗುರುತಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದ ವಿವಿಧ ಭಾಗಗಳಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸಲು ಕೈಗಾರಿಕಾ ನೀತಿ 2020-25ನ್ನು ಜಾರಿಗೆ ತರಲಾಗಿದೆ.<br><br>2020-25ನೇ ಕೈಗಾರಿಕಾ ನೀತಿಯು ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಬೆಂಗಳೂರಿನಿಂದ ಹೊರಗಡೆ ಕೈಗಾರಿಕೆಗಳನ್ನು ಕರ್ನಾಟಕದಾದ್ಯಂತ ಟಯರ್-2 ಹಾಗೂ ಟಯರ್-3 ನಗರಗಳಲ್ಲಿ ವಿಸ್ತರಿಸುವ ಧ್ಯೇಯವನ್ನು ಹೊಂದಿರುತ್ತದೆ.</td></tr>
</table>

| | | |
|---|---|---|
| (ಈ) | ಬೃಹತ್ ಕೈಗಾರಿಕೆಗಳಿಂದ ರಾಜ್ಯಕ್ಕೆ ಹೆಚ್ಚು ಆದಾಯ ಬರುವುದರಿಂದ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ; (ವಿವರ ನೀಡುವುದು) | ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು, ಈ ನೀತಿಯಲ್ಲಿ ಹಿಂದುಳಿದಿರುವ ಕೈಗಾರಿಕಾ ಅಭಿವೃದ್ಧಿಯನುಸಾರ ಬಂಡವಾಳ ಹೂಡಿಕೆಗಳಿಗೆ ರಿಯಾಯಿತಿ ಒದಗಿಸಲು ರಾಜ್ಯದ ಜಿಲ್ಲೆಗಳನ್ನು ಮೂರು ಜೋನ್‌ಗಳನ್ನಾಗಿ ವಿಂಗಡಿಸಲಾಗಿದೆ. ಜೋನ್-1 ಹಾಗೂ 2 ರಡಿ ಕೈಗಾರಿಕಾ ಅಭಿವೃದ್ಧಿಯಲ್ಲಿ ಹಿಂದುಳಿದ ಜಿಲ್ಲೆಗಳು ಸೇರಿರುತ್ತವೆ.<br><br>ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಜೋನ್-3 ರಲ್ಲಿ ವರ್ಗೀಕರಿಸಲಾಗಿದ್ದು, ಇಲ್ಲಿ ಕೈಗಾರಿಕೆಗಳಿಗೆ ಯಾವುದೇ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡುತ್ತಿರುವುದಿಲ್ಲ.<br><br>ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಂದ ರಾಜ್ಯಕ್ಕೆ ಹೆಚ್ಚು ಆದಾಯ ಬರುವ ನಿಟ್ಟಿನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕೈಗಾರಿಕೋದ್ಯಮಿಗಳನ್ನು ರಾಜ್ಯದ ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸಲು 2022ರ ನವೆಂಬರ್ 2, 3, 4 ರಂದು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿದೆ.<br><br>ಈ ಸಂದರ್ಭದಲ್ಲಿ ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲದ ಮಾಹಿತಿಯನ್ನು ಕೈಗಾರಿಕೋದ್ಯಮಿಗಳಿಗೆ ತಿಳಿಸಿ, ವಲಯ 1 ಮತ್ತು ವಲಯ 2 ರ ಜಿಲ್ಲೆಗಳಲ್ಲಿ ಬಂಡವಾಳವನ್ನು ಹೂಡುವಂತೆ ಪ್ರೇರೇಪಿಸಲಾಗುತ್ತದೆ. |
| (ಉ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೊಸದಾಗಿ ಯಾವುದಾದರೂ ಬೃಹತ್ ಕೈಗಾರಿಕೆ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;<br>ಕೈಗೊಂಡಿದ್ದಲ್ಲಿ, ಯಾವ ಕೈಗಾರಿಕೆ ಪ್ರಾರಂಭಿಸಲು ಕ್ರಮ ಕೈಗೊಂಡಿದೆ? (ಸಂಪೂರ್ಣವಾದ ವಿವರ ನೀಡುವುದು) | 2019 ರಿಂದ 2022ರವರೆಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಟ್ಟು 156 ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಈ ಪ್ರಸ್ತಾವನೆಗಳಿಂದ ಒಟ್ಟು ರೂ.11,716.16 ಕೋಟಿ ಬಂಡವಾಳ ಹೂಡಿಕೆ ಮತ್ತು 46597 ಉದ್ಯೋಗ ಸೃಜನೆ ನಿರೀಕ್ಷಿಸಲಾಗಿದೆ. |

ಸಿಐ 299 ಎಸ್‌ಪಿಐ 2022

(ಡಾ. ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

# ಅನುಬಂಧ

## ಕಳೆದ ಮೂರು ವರ್ಷಗಳಲ್ಲಿ ಅನುಮೋದನೆಗೊಂಡ ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳ ಜಿಲ್ಲಾವಾರು ವಿವರ

| ಕ್ರ. ಸಂ | ಜಿಲ್ಲೆ | ಘಟಕಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 64 |
| 2 | ಬೆಂಗಳೂರು (ಗ್ರಾಮಾಂತರ) | 245 |
| 3 | ಬಾಗಲಕೋಟೆ | 16 |
| 4 | ಬೆಳಗಾವಿ | 20 |
| 5 | ಬಳ್ಳಾರಿ | 29 |
| 6 | ಬೀದರ್ | 6 |
| 7 | ವಿಜಯಪುರ | 23 |
| 8 | ಚಾಮರಾಜನಗರ | 21 |
| 9 | ಚಿಕ್ಕಮಗಳೂರು | 1 |
| 10 | ಚಿಕ್ಕಬಳ್ಳಾಪುರ | 102 |
| 11 | ಚಿತ್ರದುರ್ಗ | 5 |
| 12 | ದಕ್ಷಿಣ ಕನ್ನಡ | 11 |
| 13 | ಧಾರವಾಡ | 59 |
| 14 | ದಾವಣಗೆರೆ | 3 |
| 15 | ಗದಗ | 0 |
| 16 | ಕಲಬುರ್ಗಿ | 4 |
| 17 | ಹಾಸನ | 16 |
| 18 | ಹಾವೇರಿ | 5 |
| 19 | ಕೊಡಗು | 0 |
| 20 | ಕೋಲಾರ | 54 |
| 21 | ಕೊಪ್ಪಳ | 9 |
| 22 | ಮಂಡ್ಯ | 25 |
| 23 | ಮೈಸೂರು | 77 |
| 24 | ರಾಯಚೂರು | 14 |
| 25 | ರಾಮನಗರ | 92 |
| 26 | ಶಿವಮೊಗ್ಗ | 2 |
| 27 | ತುಮಕೂರು | 115 |
| 28 | ಉಡುಪಿ | 5 |
| 29 | ಉತ್ತರಕನ್ನಡ | 1 |
| 30 | ಯಾದಗಿರಿ | 79 |
| ಒಟ್ಟು | | **1103** |
| | | |